ಸಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ**30.12.2022**
ಮುಂದುವರೆದ ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ

ನನಗೆ ಇಬ್ಬರು ಮಕ್ಕಳು ಇದ್ದು, ಮಗಳಿಗೆ ಪ್ರಸ್ತುತ 17 ವರ್ಷ, ಮಗನಿಗೆ 13 ವರ್ಷ ವಯಸ್ಸು. ನಾನು ನನ್ನ ಮದುವೆಯ ನಂತರ 10 ವರ್ಷಗಳ ಕಾಲ ನನ್ನ ಗಂಡನೊಂದಿಗೆ ವಾಸವಿದ್ದೆ. ಮದುವೆಯ 4-5 ವರ್ಷಗಳ ಕಾಲ ನಾನು ಮತ್ತು ಆರೋಪಿ ಅನ್ಯೋನ್ಯವಾಗಿದ್ದು, ನನ್ನ ಮಗ ಜನಿಸಿದ ನಂತರ ಆರೋಪಿ ನನ್ನ ಮೇಲೆ ಅನುಮಾನ ಪಡುತ್ತಿದ್ದು, ನನ್ನೊಂದಿಗೆ ಜಗಳ ಮಾಡುತ್ತಿದ್ದರು. ಆರೋಪಿ ನನ್ನನ್ನು ಅವ್ಯಾಚ್ಯ ಶಬ್ದಗಳಿಂದಿ ನಿಂದಿಸುತ್ತಾ ರಸ್ತೆಯಲ್ಲಿ ನನ್ನನ್ನು ಎಳೆದಾಡುತ್ತಿದ್ದರು. ಹೀಗೆ 2016 ರಲ್ಲಿ ನನ್ನ ಗಂಡ ಜಗಳ ಮಾಡಿ ರಾತ್ರಿ ನನ್ನನ್ನು ಮನೆಯಿಂದ ಆಚೆ ಹಾಕಿದ್ದು, ಬೆಳಗಾಗುವವರೆವಿಗೆ ನಾನು ಮನೆಯಿಂದ ಆಚೆ ಇದ್ದು, ಬೆಳಗ್ಗೆ ಎದ್ದು ನಾನು ನನ್ನ ಅಮ್ಮನ ಮನೆಗೆ ನನ್ನ ಮಕ್ಕಳೊಂದಿಗೆ ಹೋಗಿರುತ್ತೇನೆ. ದಿನಾಂಕ ತಿಂಗಳು ನನಗೆ ನೆನಪಿಲ್ಲ. ಅಂದಿನಿಂದ ಇಲ್ಲಿಯವರೆವಿಗೆ ನಾನು ಮತ್ತು ನನ್ನ ಮಕ್ಕಳು ನಮ್ಮ ಅಮ್ಮನ ಮನೆಯಲ್ಲೆ ವಾಸವಿದ್ದೇವೆ. ನಮ್ಮನ್ನು ನನ್ನ ಗಂಡನ ಮನೆಯಿಂದ ನಮ್ಮ ಅಕ್ಕ ಮತ್ತು ಭಾವ ಬಂದು ಕರೆದುಕೊಂಡು ಹೋಗಿರುತ್ತಾರೆ. ಕೆ ಆರ್ ಪೇಟೆ ಪೊಲೀಸ್ ಠಾಣೆಯಲ್ಲಿ 2-3 ಬಾರಿ ಆರೋಪಿಯ ವಿರುದ್ಧ ದೂರನ್ನು ನೀಡಿದ್ದು, ಅಲ್ಲಿ ಅವರು ರಾಜಿ ಮಾಡಿ ನನ್ನನ್ನು ಕಳುಹಿಸಿರುತ್ತಾರೆ. 2 ತಿಂಗಳ ನಂತರ ಹಿರಿಯರು ಸಮಾಧಾನ ಮಾಡಿ ನನ್ನನ್ನು ನನ್ನ ಗಂಡನ ಮನೆಗೆ ಕಳುಹಿಸಿದ್ದು ಮತ್ತೆ ನನ್ನ ಗಂಡ ನಾನು ಸಾಲ ಮಾಡಿಕೊಂಡಿದ್ದೇನೆ ನನಗೆ ಹಣ ನೀಡು ಎಂದು ಪ್ರತಿ ದಿನ ನನ್ನ ಮೇಲೆ ಹಲ್ಲೆ ಮಾಡುತ್ತಿದ್ದರು. ಆಗ ನಾನು ಕುಶಾಲನಗರ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದು, ಅಲ್ಲಿ ಸಹ ಪೊಲೀಸರು ರಾಜಿ ಮಾಡಿದ್ದರಿಂದ ರಾಜಿ ಸಾಧ್ಯವಾಗುವುದಿಲ್ಲವೆಂದು ನಾನು ನನ್ನ ಮಕ್ಕಳನ್ನು ಕರೆದುಕೊಂಡು ನನ್ನ ತಾಯಿ ಮನೆಗೆ ಹೋಗಿರುತ್ತೇನೆ.

ನಂತರ 2017 ರಲ್ಲಿ ಜೀವನಾಂಶಕ್ಕಾಗಿ ಕೆ ಆರ್ ಪೇಟೆ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದು, ಸದ್ರಿ ಸಿ ಆರ್ ಎಂ ಸಿ ನಂಃ 87/2017 ಆಗಿರುತ್ತದೆ. ದಿಃ 04.01.2020 ರಂದು

ನ್ಯಾಯಾಲಯವು ನನ್ನನ್ನು ಆರೋಪಿಯ ಮನೆಗೆ ಹೋಗುವಂತೆ ತಿಳಿಸಿದ್ದು, ಅದರಂತೆ ಮರು ದಿನ ನಾನು ಆರೋಪಿಯ ಮನೆಗೆ ಬಂದಾಗ ಆರೋಪಿ ಬೇರೊಬ್ಬಳನ್ನು ಮದುವೆಯಾಗಿ ಮನೆಯಲ್ಲಿ ಇರಿಸಿಕೊಂಡಿದ್ದು, ಆ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ನನ್ನನ್ನು ಅವ್ಯಾಚ್ಯ ಶಬ್ದಗಳಿಂದಿ ನಿಂದಿಸಿ ನನ್ನ ಮೇಲೆ ಹಲ್ಲೆ ಮಾಡಿ ಅಲ್ಲಿಂದ ನನ್ನನ್ನು ಕಳುಹಿಸಿರುತ್ತಾರೆ. ನಾನು ಅವರ ಮನೆಗೆ ಹೋದಾಗ ಆ ಮನೆಯಲ್ಲಿ ಒಂದು ಹೆಂಗಸು ಓಡಾಡುತ್ತಿದ್ದು, ಅವರನ್ನು ವಿಚಾರಿಸಲಾಗಿ ನಾನು ಆರೋಪಿಯ ಹೆಂಡತಿ ಎಂದು ತಿಳಿಸಿರುತ್ತಾರೆ. ಆ ನಂತರ ನಾನು ಕುಶಾಲನಗರದ ವೆಂಕಟೇಶ್ವರ ಬಡಾವಣೆಯಲ್ಲಿ ಇರುವ ನಮ್ಮ ಅಕ್ಕ ಭಾವನ ಮನೆಗೆ ಹೋಗಿರುತ್ತೇನೆ. ಆ ನಂತರ ನನಗೆ ತುಂಬಾ ಹುಷಾರಿಲ್ಲದ ಕಾರಣ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದಿದ್ದು, ನಂತರ ಆರೋಪಿಯ ಅಕ್ಕಪಕ್ಕದ ಮನೆಯವರನ್ನು ವಿಚಾರಿಸಲಾಗಿ, ಅವರು ಆರೋಪಿ ಈಗಾಗಲೇ ಒಂದು ವರ್ಷದ ಹಿಂದೆ ಮತ್ತೊಂದು ಮದುವೆಯಾಗಿರುವ ಬಗ್ಗೆ ತಿಳಿಸಿರುವುದನ್ನು ಸ್ಪಷ್ಟ ಪಡಿಸಿಕೊಂಡು ಆರೋಪಿಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರನ್ನು ದಿಃ 25.01.2020 ರಂದು ಸಲ್ಲಿಸಿರುತ್ತೇನೆ.

ನಂತರ ಅದೇ ದಿನ ಕಾಳಮ್ಮ ಕಾಲೋನಿಯಲ್ಲಿ ಇರುವ ಆರೋಪಿಯ ಮನೆಯ ಬಳಿ ಪೊಲೀಸರು ಬಂದು ಮಹಜರ್ ಕ್ರಮ ಜರುಗಿಸಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ, ಆಗ ನನ್ನೊಂದಿಗೆ ಚಾಸಾ-2 ಮತ್ತು 4 ರವರು ಹಾಜರಿದ್ದು, ಆಗ ಸಮಯ 3.00 ರಿಂದ 4.00 ಗಂಟೆಯಾಗಿರುತ್ತದೆ. ನಂತರ ದೂರನ್ನು ನೀಡಿ 15 ದಿನಗಳ ನಂತರ ಪೊಲೀಸ್ ಠಾಣೆಗೆ ನನ್ನ ಹಾಗೂ ಆರೋಪಿಯ ವಿವಾಹ ಆಮಂತ್ರಣ ಪತ್ರಿಕೆ, ನನ್ನ ಹಾಗೂ ಅರೋಪಿಯ ಆಧಾರ್ ಕಾರ್ಡ್ ಹಾಗೂ ಪಡಿತರ ಚೀಟಿಯನ್ನು ಹಾಜರುಪಡಿಸಿರುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ